ದಿಃ 25.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ಶ್ರೀ ಎಂ.ಎಸ್.ಜಿ. ವಕೀಲರಿಂದ 2 ರಿಂದ 5 ನೇ ಪ್ರತಿವಾದಿಗಳ ಪರವಾಗಿ</u>

1. ನಾನು ಮಣಬೂರಿನ ಚಿಕ್ಕಮ್ಮನ ಮನೆಯಲ್ಲಿ ವಾಸವಿದ್ದೇನೆ. ಚಿಕ್ಕಮಗಳೂರಿನ ಶೋ ರೂಮ್ ನಲ್ಲಿ ಕೆಲಸ ಮಾಡುತ್ತೇನೆ. ನನ್ನ ತಾಯಿ ಬಣಕಲ್ ನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ನಿಮ್ಮ ತಾಯಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ನನ್ನ ತಾಯಿಯ ಜೊತೆ ಸಂಪರ್ಕದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನಾನು 6 ರಿಂದ 7 ವರ್ಷ ಇದ್ದಾಗಲೇ ನನ್ನ ಚಿಕ್ಕಮ್ಮನ ಮನೆಯಲ್ಲಿ ವಾಸವಿರುವುದರಿಂದ ನನ್ನ ತಾಯಿಯ ಜೊತೆ ಸಂಪರ್ಕ ಹೊಂದಿಲ್ಲ. ನನ್ನ ಚಿಕ್ಕಮ್ಮ ನನ್ನ ತಾಯಿಯ ತಂಗಿ ಆಗಿರುತ್ತಾರೆ. ನನ್ನ ತಾಯಿ ನನ್ನ ಚಿಕ್ಕಮ್ಮನ ಮನೆಗೆ ಬಂದು ಹೋಗಿ ಮಾಡುವುದಿಲ್ಲ. ನನ್ನ ತಾಯಿ ಮತ್ತು ನನ್ನ ನಡುವೆ ದ್ವೇಷ ಇಲ್ಲ. ನನ್ನ ತಂದೆ ನಾನು 3 ವರ್ಷದವನು ಇದ್ದಾಗಲೇ ತೀರಿಕೊಂಡಿದ್ದರು.
2. ದಾವಾ ಜಮೀನು ನನ್ನ ತಂದೆಗೆ ಆತನ ತಂದೆಯ ಕಡೆಯಿಂದ ಬಂದಿರುತ್ತದೆ. ನನ್ನ ತಂದೆಗೆ ಆತನ ತಂದೆ ವೀಲುನಾಮೆ ಬರೆದುಕೊಟ್ಟಿದ್ದಾರೆ. ನನ್ನ ತಂದೆಯ ತಂದೆಗೆ ದಾವಾ ಆಸ್ತಿ ಅವರ ತಂದೆಯ ಕಡೆಯಿಂದ ಬಂದಿದೆ ಎಂದರೆ ಸರಿ. ನನ್ನ ತಂದೆಗೆ ನಾನು ಒಬ್ಬನೇ ಮಗ. ನನ್ನ ತಾಯಿ ಈಗ ಏನು ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ITI ಕಲಿತಿದ್ದೇನೆ. ದಾವಾ ಆಸ್ತಿ ನನ್ನ ತಂದೆಗೆ ವೀಲುನಾಮೆ ಮೂಲಕ ಬಂದ ಬಗ್ಗೆ ವೀಲುನಾಮೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ನನ್ನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಬಣಕಲ್ ನ ವಿದ್ಯಾಭಾರತಿ ಸಂಸ್ಥೆಯಲ್ಲಿ ಮಾಡಿದ್ದೇನೆ. ನಾನು 9 ವರ್ಷ ಆ ಶಿಕ್ಷಣ ಸಂಸ್ಥೆಯಲ್ಲಿ ಕಲಿತಿದ್ದೇನೆ. ನಾನು ಆ ಶಿಕ್ಷಣ ಸಂಸ್ಥೆಯಲ್ಲಿ ವಿದಾಭ್ಯಾಸ ಮುಗಿಸಿದಾಗ ನನಗೆ 16 ವರ್ಷ ಆಗಿತ್ತು. ನಾನು ಆ ವಿದ್ಯಾ ಸಂಸ್ಥೆಯಲ್ಲಿ

ಕಲಿಯುತ್ತಿರುವಾಗ ನನ್ನ ತಾಯಿಯ ಜೊತೆ ಬಣಕಲ್ ನಲ್ಲಿ ವಾಸವಿದ್ದೆ ಎಂದರೆ ಸಾಕ್ಷಿ ನಾನು ನನ್ನ ಚಿಕ್ಕಮ್ಮನ ಮಕ್ಕಳು ಹಾಸ್ಟೆಲ್ ನಲ್ಲಿ ವಾಸವಿದ್ದೇವು ಎಂದು ನುಡಿಯುತ್ತಾರೆ. ಹಾಸ್ಟೆಲ್ ನ ಖರ್ಚು ವೆಚ್ಚಗಳನ್ನು ನನ್ನ ಚಿಕ್ಕಮ್ಮ ಭರಿಸುತ್ತಿದ್ದರು. ಹಾಸ್ಟೆಲ್ ನಲ್ಲಿ ವಾಸವಿದ್ದಾಗ ನಾನು ನನ್ನ ತಾಯಿಯ ಮನೆಗೆ ಹೋಗುತ್ತಿರಲಿಲ್ಲ. ಹಾಸ್ಟೆಲ್ ನಲ್ಲಿ ಇದ್ದಾಗ ನಾನು ನನ್ನ ತಾಯಿಗೆ ಹಣವನ್ನು ಕೇಳಿಲ್ಲ. ನನ್ನ ತಾಯಿಯ ಬಳಿ ಶಾಲೆ ಮತ್ತು ಹಾಸ್ಟೆಲ್ ನ ಖರ್ಚಿಗಾಗಿ ಹಣವನ್ನು ಕೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ನನ್ನ ಚಿಕ್ಕಮ್ಮನೆ ಎಲ್ಲಾ ಖರ್ಚು ವೆಚ್ಚಗಳನ್ನು ಭರಿಸುತ್ತಿದ್ದರು ಎಂದು ನುಡಿಯುತ್ತಾರೆ.

3. ನನ್ನ ತಾಯಿ ದಾವಾ ಆಸ್ತಿಯನ್ನು ಮಾರಾಟ ಮಾಡಿ ಬಣಕಲ್ ಗೆ ಬಂದ ನಂತರ ನನ್ನನ್ನು ಶಾಲೆಗೆ ಸೇರಿಸಿದ್ದರು ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮನ ಮನೆಗೆ ನಾನು ಹೋದಾಗ ನನಗೆ 7 ವರ್ಷ ಆಗಿತ್ತು. ನನ್ನ ತಾಯಿ ಬೇರೆಯವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ವಿಚಾರ 2 ವರ್ಷದ ಹಿಂದೆ ತಿಳಿಯಿತು. ದಾವಾ ಆಸ್ತಿಯನ್ನು ಸುಚಿತ ಎಂಬುವರಿಗೆ ಮಾರಾಟ ಮಾಡಿದ್ದಾರೆ. ಮೂಲತಃ ದಾವಾ ಜಮೀನು ತರಿ ಜಮೀನು ಎಂದರೆ ಸರಿ. ದಾವಾ ಆಸ್ತಿಯನ್ನು ಮಾರಾಟ ಮಾಡುವ ಮೊದಲು ಆ ಜಮೀನಿನಲ್ಲಿ ಬೆಳೆಯನ್ನು ನನ್ನ ತಾಯಿ ಬೆಳೆಯುತ್ತಿದ್ದರು. ಈಗ ಆ ಜಮೀನು 5 ನೇ ಪ್ರತಿವಾದಿ ರಾಣಿಯವರ ಸ್ವಾಧೀನದಲ್ಲಿ ಇದೆ. 5 ನೇ ಪ್ರತಿವಾದಿ ದಾವಾ ಜಮೀನಿನಲ್ಲಿ ಕಾಫಿ ಬೆಳೆದಿದ್ದಾರೆ. ನನ್ನ ತಾಯಿ ದಾವಾ ಆಸ್ತಿಯನ್ನು ಮಾರಾಟ ಮಾಡಿ ಬಣಕಲ್ ಗೆ ಬರುವ ವರೆಗೂ ಹೊಸಂತಪುರದಲ್ಲಿ ಇದ್ದರು ನಾನು ಸಹ ಅವರ ಜೊತೆ ವಾಸವಿದ್ದೆ ಎಂದರೆ ಸರಿಯಲ್ಲ.

4. ನಾನು ಮತ್ತು ಚಿಕ್ಕಮ್ಮ ಜಾಗವನ್ನು ಕೇಳಲು ಹೋದಾಗ 3 ನೇ ಪ್ರತಿವಾದಿಗೆ ದಾವಾ ಜಮೀನು ಮಾರಾಟ ಆಗಿರುವ ವಿಚಾರ ತಿಳಿಯಿತು. ಮಾರಾಟವಾದ ವಿಚಾರವನ್ನು ನನ್ನ ತಾಯಿಯನ್ನು ಕೇಳಿದ್ದೆವು. ಕ್ರಯ ಪತ್ರವನ್ನು ನೋಡಿದಾಗ ದಾವಾ ಜಮೀನು 2013 ರಲ್ಲಿ ಮಾರಾಟ ಆಗಿರುವ ವಿಚಾರ ತಿಳಿಯಿತು. 3 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ವಿಚಾರ

ಕ್ರಯಪತ್ರವನ್ನು ಪಡೆದ ನಂತರ ತಿಳಿಯಿತು. 3 ನೇ ಪ್ರತಿವಾದಿ ಕ್ರಯಪತ್ರವನ್ನು ಪಡೆದು ನೋಡಿದಾಗ 3 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ ವಿಚಾರ ತಿಳಿದು ಬಂತು. 3 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ ವಿಚಾರ ನನ್ನ ತಾಯಿ ಬರೆದುಕೊಟ್ಟ ಕ್ರಯಪತ್ರವನ್ನು ನೋಡಿದಾಗ ತಿಳಿಯಿತು ಎಂದರೆ ಸರಿ.

5. ನನ್ನ ತಂದೆಗೆ ಒಬ್ಬ ಅಣ್ಣ ಮತ್ತು ಒಬ್ಬ ತಂಗಿ ಇದ್ದರು. ನಮ್ಮ ತಂದೆಯ ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ತಂದೆಯ ಅಣ್ಣ ಮತ್ತು ತಂಗಿಯನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ. ಅವರನ್ನು ಈ ಕೇಸಿನಲ್ಲಿ ಪಕ್ಷಗಾರನ್ನಾಗಿ ಮಾಡಲು ತೊಂದರೆ ಇತ್ತು, ಕಾರಣ ಅವರು ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ, ಅವರು ನನ್ನ ಜೊತೆ ಮಾತನಾಡುವುದಿಲ್ಲ. ನಿಪಿ-1 ವಂಶವೃಕ್ಷವನ್ನು ಬರೆಸುವಾಗಲೂ ನನ್ನ ಅಣ್ಣ ಮತ್ತು ತಂಗಿ ಎಲ್ಲಿ ಇದ್ದಾರೆ ಎಂದು ನನಗೆ ಗೊತ್ತಿರಲಿಲ್ಲ. ನನ್ನ ತಾಯಿ ದಾವಾ ಆಸ್ತಿಯನ್ನು ಮಾರಾಟ ಮಾಡಿ ಬಣಕಲ್ ಗೆ ಬಂದ ಬಳಿಕ ಹೊಸಂಪುರಕ್ಕೆ ಹೋದ ವಿಚಾರ ನನಗೆ ಗೊತ್ತಿಲ್ಲ. ನನ್ನ ತಾಯಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ ಬಳಿಕವೇ ಬಣಕಲ್ ಗೆ ಬಂದು ವಾಸವಾಗಿದ್ದರೂ ಎಂದರೆ ಸರಿ. ಆ ವಿಚಾರ ನನಗೆ ತಿಳಿದಿತ್ತು ಎಂದರೆ ಸಾಕ್ಷಿ ನನ್ನ ತಾಯಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ ಬಳಿಕ ಬಣಕಲ್ ಗೆ ಬಂದಿದ್ದರೋ ಅಥವಾ ಅದಕ್ಕೂ ಮೊದಲೇ ಬಣಕಲ್ ಗೆ ಬಂದಿದ್ದರೋ ಎಂದು ನನಗೆ ಗೊತ್ತಿಲ್ಲ.

6. ನನ್ನ ತಾಯಿ 3 ನೇ ಪ್ರತಿವಾದಿಗೆ ಬರೆದು ಕೊಟ್ಟ ಕ್ರಯಪತ್ರವನ್ನು ನಾನು ಪೂರ್ತಿ ಓದಿ ನೋಡಿದ್ದೇನೆ. ನನ್ನ ತಾಯಿ ದಾವಾ ಆಸ್ತಿಯನ್ನು ಮಾರಾಟ ಮಾಡುವುದಕ್ಕೆ ಮೊದಲೇ ಬಣಕಲ್ ಗೆ ಬಂದು ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ನ್ಯಾಯ ಸಮ್ಮತ ಬೆಲೆಯನ್ನು ನೀಡಿ ದಾವಾ ಆಸ್ತಿಯನ್ನು ನನ್ನ ತಾಯಿಯಿಂದ ಖರೀದಿಸಿದ್ದಾರೆ ಎಂದರೆ ಸುಳ್ಳು. ಕ್ರಯ ಪತ್ರದಲ್ಲಿ ಹಣವನ್ನು ನೀಡಿದರೆ ಮಾತ್ರ ಆ ಬಗ್ಗೆ ವಿವರವನ್ನು ಬರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರದಲ್ಲಿ ನಮೂದು ಮಾಡಿರುವ ಹಣವನ್ನು ನನಗೆ ನನ್ನ ತಾಯಿ

ನೀಡಿಲ್ಲ. ದಾವಾ ಆಸ್ತಿಯನ್ನು ನನ್ನ ತಾಯಿ ಮಾರಾಟ ಮಾಡಿದಾಗ ನನಗೆ 11 ವರ್ಷ ಆಗಿತ್ತು. ದಾವಾ ಆಸ್ತಿಯನ್ನು ನನ್ನ ತಾಯಿ ನನ್ನ ಅನುಕೂಲಕ್ಕಾಗಿ minor guardian ಆಗಿ 3 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

7. ನಿಪಿ-12 ಕ್ರಯ ಪತ್ರದಲ್ಲಿ ಶೆಡ್ಯೂಲ್ ಸರ್ವೆ ನಂಬರ್ ತರಿ ಜಮೀನು ಮಹಿಳೆ ಆಗಿರುವ ನನಗೆ ಖುದ್ದು ಕೃಷಿ ಮಾಡಲು ಆಗುತ್ತಿಲ್ಲ. ಅಲ್ಲದೇ ನನ್ನ ಒಬ್ಬನೇ ಮಗನ ವಿದ್ಯಾಭ್ಯಾಸ ಮಾಡಿಸಲು ನಾನು ಬಣಕಲ್ ಗ್ರಾಮದಲ್ಲಿ ನೆಲೆಸಿದ್ದು, ಬಣಕಲ್ ಗ್ರಾಮದಲ್ಲಿ ವಾಸದ ಮನೆ ಖರೀದಿಸಲು ಹಾಗೂ ನನ್ನ minor ಮಗನ ವಿದ್ಯಾಭ್ಯಾಸ ಮಾಡಿಸಲು ಹಣಕಾಸಿನ ಅಗತ್ಯಗಳ ಸಲುವಾಗಿ ಶೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡುವುದು ನನಗೆ ಅನಿವಾರ್ಯವಾಗಿದೆ ಎಂಬ ಒಕ್ಕಣಿಕೆಯನ್ನು ಬರೆಸಲಾಗಿದೆ ಎಂದರೆ ಸರಿ. ದಾವಾ ಆಸ್ತಿಯ ಸರ್ವೆ ನಂಬರ್ 221/2. ದಾವಾ ಆಸ್ತಿಯ ಪೂರ್ವಕ್ಕೆ ನಾರಾಯಣ ಗೌಡರ ಜಮೀನು, ಪಶ್ಚಿಮಕ್ಕೆ ದೇವಸ್ಥಾನ. ಸಾಕ್ಷಿ ಸ್ವತಃ  ಪಶ್ಚಿಮಕ್ಕೆ ನಾರಾಯಣ ಗೌಡರ ಜಮೀನು ಇದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ಮಂಜುನಾಥಗೌಡರ ಜಮೀನು, ಉತ್ತರಕ್ಕೆ ತಿಮ್ಮೇಗೌಡರ ಜಮೀನು ಬರುತ್ತದೆ.  ನಾನು ಹುಟ್ಟಿದಾಗಿನಿಂದ ದಾವಾ ಜಮೀನಿಗೆ ಹೋಗಿಲ್ಲ ಎಂದರೆ ಸಾಕ್ಷಿ ನಾನು ಹುಟ್ಟಿದಾಗ ದಾವಾ ಜಮೀನಿನಲ್ಲೇ ಇದ್ದೆ ಎಂದು ನುಡಿಯುತ್ತಾರೆ. ನಾನು 2002 ರಲ್ಲಿ ಜನಿಸಿರುತ್ತೇನೆ. ನಾನು ಚಿಕ್ಕಮ್ಮನ ಮನೆಗೆ ಹೋದಾಗ 7 ವರ್ಷ ಆಗಿತ್ತು. ನನ್ನ ತಂದೆಯವರು 2004 ರಲ್ಲಿ ತೀರಿಕೊಂಡಿದ್ದರು.

8. 3 ನೇ ಪ್ರತಿವಾದಿಗೆ ಆದ ಕ್ರಯಪತ್ರವನ್ನು 2023 ರಲ್ಲಿ ಪಡೆದುಕೊಂಡಿದ್ದೇನೆ ದಿನಾಂಕ ಮತ್ತು ತಿಂಗಳು ನನಗೆ ನೆನಪಿಲ್ಲ. ವಾದಾ ಪತ್ರದಲ್ಲಿ ನಾನು ಇಂತಹ ದಿನಾಂಕದಂದು ಕ್ರಯ ಪತ್ರವನ್ನು ಪಡೆದ ದಿನ ನನಗೆ ದಾವಾ ಆಸ್ತಿಯನ್ನು ನನ್ನ ತಾಯಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿದ ವಿಚಾರ ತಿಳಿಯಿತು ಎಂದು ಬರೆಸಿಲ್ಲ. ದಾವಾ ಆಸ್ತಿ ನನ್ನ ತಂದೆಗೆ ವೀಲುನಾಮೆ ಮೂಲಕ ಬಂದು ಖಾತೆಯಾಗಿದೆ ಎಂಬ ಬಗ್ಗೆ ಕಂದಾಯ ದಾಖಲೆಗಳನ್ನು ಹಾಜರುಪಡಿಸಿಲ್ಲ. ನನ್ನ

ತಾಯಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, 3 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, 4 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, ಮಾರಾಟ ಮಾಡಿದವರು ಕ್ರಯದ ಹಣವನ್ನು ನೀಡಿಯೇ ದಾವಾ ಆಸ್ತಿಯನ್ನು ಖರೀದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿದ, 4 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ಮಾರಾಟ ಮಾಡಿದ ಕ್ರಯ ಪತ್ರಗಳನ್ನು ನಾನು ನೋಡಿದ್ದೇನೆ. ಆ ಕ್ರಯ ಪತ್ರಗಳಲ್ಲಿ ಇರುವ ಬರವಣಿಗೆಗಳನ್ನು ನಾನು ನೋಡಿದ್ದೇನೆ. ಆ ಕ್ರಯ ಪತ್ರಗಳಲ್ಲಿ ಕ್ರಯದ ಮೊಬಲಗನ್ನು ನಮೂದು ಮಾಡಿದ್ದಾರೆ. ನನ್ನ ತಾಯಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ ವಿಚಾರ ನನಗೆ ಮಾರಾಟ ಮಾಡಿದಾಗಲೇ ತಿಳಿದಿದ್ದರೂ ಸಹ 2 ವರ್ಷದ ಹಿಂದೆ ಮಾರಾಟ ಮಾಡಿದ ವಿಚಾರ ತಿಳಿಯಿತು ಎಂದು ಈ ದಾವೆಗಾಗಿ ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಾನು ನನ್ನ ಪಾಲಿಗೆ ಬರಬೇಕಾದ ಆಸ್ತಿಯನ್ನು ಕೊಡಿಸಿಕೊಡುವಂತೆ ಪರಿಹಾರವನ್ನು ಈ ದಾವೆಯಲ್ಲಿ ಕೋರಿದ್ದೇನೆ. ನನಗೆ ದಾವಾ ಆಸ್ತಿಯಲ್ಲಿ ಬರುವ ಪಾಲನ್ನು ನನ್ನ ತಾಯಿ 1 ನೇ ಪ್ರತಿವಾದಿ ನೀಡಬೇಕೆಂದು ಕೇಳಿದ್ದೇನೆ. ದಾವಾ ಆಸ್ತಿಗಳು ನನ್ನ ತಂದೆಯ ಹೆಸರಿಗೆ ಯಾವ ರೀತಿ ಖಾತೆ ಆದವು ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಈ ದಾವೆಯಲ್ಲಿ ನಿಮ್ಮ ವಿಳಾಸವನ್ನು ಎಲ್ಲಿ ವಾಸವಿದ್ದೀರಿ ಎಂದು ಕಾಣಿಸಿದ್ದೀರಿ ಎಂದರೆ ಸಾಕ್ಷಿ ದಾವೆಯನ್ನು ಹಾಕಿದಾಗ ನಾನು ಬಣಕಲ್ ನಲ್ಲಿ room ಮಾಡಿಕೊಂಡು ವಾಸವಿದ್ದೆ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಿಮ್ಮ ವಿಳಾಸವನ್ನು ಎಲ್ಲಿ ವಾಸವಿದ್ದೀರಿ ಎಂದು ಕಾಣಿಸಿದ್ದೀರಿ ಎಂದರೆ ಸಾಕ್ಷಿ ನಾನು ಬಣಕಲ್ ನಲ್ಲಿ room ಮಾಡಿಕೊಂಡು ವಾಸವಿದ್ದೆ ಎಂದು ನುಡಿಯುತ್ತಾರೆ. ನಾನು ಬಣಕಲ್ ನಲ್ಲಿ room ಮಾಡಿಕೊಂಡು 3 ವರ್ಷಗಳಿಂದ ವಾಸವಿದ್ದೇನೆ. ನಾನು ರೂಂ ಮಾಡಿಕೊಂಡು ಬಣಕಲ್ ನಲ್ಲಿ ವಾಸವಿರುವ ಬಗ್ಗೆ ಬಾಡಿಗೆಯ ಚೀಟಿಯನ್ನು ಹಾಜರುಪಡಿಸಿಲ್ಲ. ಬಾಡಿಗೆಯ ಕರಾರನ್ನು ಮಾಡಿಕೊಂಡಿಲ್ಲ. ಬಾಡಿಗೆಯನ್ನು ಮನೆಯ ಮಾಲೀಕರಿಗೆ ನೀಡುತ್ತಿರುವ ಬಗ್ಗೆ

ರಶೀದಿಯನ್ನು ಪಡೆದು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಈ ದಾವೆಯನ್ನು ಸಲ್ಲಿಸುವಾಗ ವಕೀಲರಿಗೆ ಮಾಹಿತಿಯನ್ನು ನಾನು ಮತ್ತು ನನ್ನ ಚಿಕ್ಕಮ್ಮ ನೀಡಿದ್ದೆವು. ವಾದ ಪತ್ರವನ್ನು ಮತ್ತು ಪ್ರಮಾಣ ಪತ್ರವನ್ನು ನಾನು ಓದಿ ನೋಡಿ ಸಹಿ ಮಾಡಿ ಕೊಟ್ಟಿರುತ್ತೇನೆ. ದಾವಾ ಆಸ್ತಿಯ ಮಾಲೀಕರಾದ 5 ನೇ ಪ್ರತಿವಾದಿಯು ಕಡೂರಿನವರು ಆಗಿರುತ್ತಾರೆ. ಕಡೂರಿನ ಯಾವ ಊರಿನಲ್ಲಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಬಾಳೂರಿನಲ್ಲಿ ವಾಸವಿದ್ದಾರೆ. ದಾವೆಯಲ್ಲಿ 4 ನೇ ಪ್ರತಿವಾದಿಯ ವಿಳಾಸವನ್ನು ಬಾಳೂರು ಎಂದು ನಾನೇ ಹೇಳಿ ಬರೆಸಿದ್ದೇನೆ.

10. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕ್ರಯದ ಕರಾರನ್ನು ಹಾಜರು ಮಾಡಿದ್ದೇನೆ ಎಂದು ಹೇಳಿದ್ದು ಆ ಕ್ರಯದ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲದೇ ಇದ್ದರೂ 5 ನೇ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಕಾನೂನು ಬದ್ದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ನಾನು ನನ್ನ ತಾಯಿಯ ಚೇತವಣೆ ಮೇರೆಗೆ ಸಲ್ಲಿಸಿದ್ದರೂ ಸಹ ನನ್ನ ತಾಯಿಗೂ ನನಗೂ ಯಾವುದೇ ಸಂಪರ್ಕ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡಿದ ವಿಚಾರ ನನಗೆ ಮೊದಲೇ ತಿಳಿದಿದ್ದರೂ ಸಹ ಅಕ್ರಮ ಲಾಭ ಪಡೆಯಲು ಈ ದಾವೆಯನ್ನು ತಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ದಾವಾ ಆಸ್ತಿ ಆತನ ತಂದೆಯ ಕಡೆಯಿಂದ ಬಂದಿರುವುದರಿಂದ ನನ್ನ ತಂದೆಯ ಅಣ್ಣ ಮತ್ತು ತಂಗಿಯನ್ನು ಈ ಕೇಸಿನಲ್ಲಿ ಪಕ್ಷಗಾರನ್ನಾಗಿ ಮಾಡಿದರೆ ಅವರಿಗೆ ಭಾಗ ನೀಡಬೇಕಾಗುತ್ತದೆ ಎಂಬ ಕಾರಣದಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಈಗಾಗಾಲೇ ಪಾಲು ಆಗಿ ಅವರು ಅವರ ಆಸ್ತಿಗಳನ್ನು ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ಆತನ ಸಹೋದರ ಸಹೋದರಿಯ ನಡುವೆ ವಿಭಾಗ ಆದ ಬಗ್ಗೆ ವಿಭಾಗ ಪತ್ರವನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ರೀತಿಯ ವಿಭಾಗ ಆಗದೇ ಇದ್ದರೂ ಆಗಿದೇ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ಈ ದಾವೆಯನ್ನು ಸಲ್ಲಿಸುವ ಮೊದಲು ನನ್ನ ತಾಯಿಗೆ ಆಸ್ತಿಯಲ್ಲಿ ಪಾಲು ನೀಡುವಂತೆ ನೋಟೀಸ್ ನೀಡಿಲ್ಲ. ನನ್ನ ತಾಯಿ ನ್ಯಾಯಯುತವಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ ಕಾರಣವೇ ನಾನು ನೋಟೀಸ್ ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಮ್ಮ ಕುಟುಂಬದ ಅನೂಕೂಲಕ್ಕಾಗಿ ಮತ್ತು ನನ್ನ ವಿದ್ಯಾಭ್ಯಾಸಕ್ಕಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

Sd/-XX

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ